ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

2010 ಡಿಸೆಂಬರ್ 15–30

ಓ ನನ್ನ ಚೇತನ ಆಗು ನೀ ಅನಿಕೇತನ



ದಿಲ್ಲಿ ಕೂಟದ ಲಾಂಛನ–ಶೇರಾ

**ಇತ್ತೀಚೆಗೆ ಗಮನ ಸೆಳೆದ ಎರಡು ಪ್ರಮುಖ ಕ್ರೀಡಾಕೂಟಗಳೆಂದರೆ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಆಟಗಳು ಹಾಗೂ ಚೀನಾದಲ್ಲಿ ನಡೆದ ಏಷ್ಯನ್ ಕ್ರೀಡೆಗಳು. ಎರಡರಲ್ಲೂ ಭಾರತೀಯ ಆಟಗಾರರು ಉತ್ಕೃಷ್ಟ ಸಾಧನೆ ತೋರಿದರು.**

ಇತ್ತೀಚೆಗೆ ಹೊಸದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡೆಗಳನ್ನು ನೀವು ಟಿವಿಯಲ್ಲಿ ನೋಡಿರಬಹುದು, ಪತ್ರಿಕೆಗಳಲ್ಲಿ ಓದಿರಬಹುದು. ಕ್ರಿಕೆಟ್, ಟೆನಿಸ್, ಹಾಕಿಯಷ್ಟೇ ಅಲ್ಲದೆ ಎಷ್ಟೊಂದು ಬಗೆಯ ಕ್ರೀಡೆಗಳಿವೆಯಲ್ಲ ಎಂದೆನಿಸಿತಲ್ಲವೆ? ಏಷ್ಯಾಡ್ ಎಂದರೆ ಏಷ್ಯಾ ಖಂಡದ ದೇಶಗಳೆಲ್ಲಾ ಒಂದೆಡೆ ಸೇರಿ ಆಡುವ ಕ್ರೀಡಾಕೂಟ ಎಂದು ನಿಮಗೆ ಗೊತ್ತು. ಹಾಗಾದರೆ ಏನಿದು ಕಾಮನ್‌ವೆಲ್ತ್?

ವಿಶ್ವದ ಬೇರೆ ಬೇರೆ ಮೂಲೆಯಲ್ಲಿರುವ 54 ದೇಶಗಳು ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮುಂತಾದ ತತ್ವಗಳ ಆಧಾರದ ಮೇಲೆ ಮಾಡಿಕೊಂಡಿರುವ ಒಂದು ಗುಂಪೇ ಕಾಮನ್‌ವೆಲ್ತ್. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಈ ಗುಂಪಿನ ದೇಶಗಳು ಮಾತ್ರ ಪಾಲ್ಗೊಳ್ಳಬಹುದು. ಒಲಿಂಪಿಕ್ಸ್‌ನಲ್ಲಿ ಆಡಲಾಗುವ ಹಲವು ಆಟಗಳ ಜತೆಗೆ ಕಾಮನ್‌ವೆಲ್ತ್ ದೇಶಗಳಿಗೇ ವಿಶಿಷ್ಟವಾದ ಕೆಲವು ಆಟಗಳನ್ನೂ ಇಲ್ಲಿ ಸೇರಿಸಲಾಗಿದೆ.

ಮೊತ್ತಮೊದಲ ಬಾರಿಗೆ ಕೆನಡಾದ ಹ್ಯಾಮಿಲ್ಟನ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡೆಗಳು ನಡೆದದ್ದು 1930ರಲ್ಲಿ. ಆರಂಭದಲ್ಲಿ ಇವಕ್ಕೆ ಬ್ರಿಟಿಷ್ ಎಂಪೈರ್ ಗೇಮ್ಸ್ ಎಂಬ ಹೆಸರಿದ್ದು, ಕಾಮನ್‌ವೆಲ್ತ್ ಗೇಮ್ಸ್ ಎಂಬ ಹೆಸರು ಬಂದಿದ್ದು 1978ರಲ್ಲಿ. ಈವರೆಗೆ 18 ಬಾರಿ ನಡೆದಿರುವ ಈ ಕ್ರೀಡಾಕೂಟಗಳಲ್ಲಿ ಆಸ್ಟ್ರೇಲಿಯಾ 11 ಬಾರಿ ಅತಿ ಹೆಚ್ಚು ಪದಕ ಗಳಿಸಿದ್ದರೆ, ಇಂಗ್ಲೆಂಡ್ 7 ಬಾರಿ ಅಗ್ರಸ್ಥಾನ ಪಡೆದಿದೆ. 1998ರಲ್ಲಿ ಕೌಲಾಲಂಪುರದಲ್ಲಿ ನಡೆದ ಕೂಟದಲ್ಲಿ ಮೊದಲಬಾರಿಗೆ ತಂಡ ಕ್ರೀಡೆಗಳಿಗೂ ಅವಕಾಶ ನೀಡಲಾಯಿತು. ದೆಹಲಿಯಲ್ಲಿ ಅಕ್ಟೋಬರ್ 3ರಿಂದ 14ರವರೆಗೆ ನಡೆದದ್ದು 19ನೇ ಕಾಮನ್‌ವೆಲ್ತ್ ಕ್ರೀಡಾಕೂಟ.

ಕ್ರೀಡಾಗ್ರಾಮದಲ್ಲಿ ವ್ಯವಸ್ಥೆಗಳು ಸರಿಯಿಲ್ಲ, ಭ್ರಷ್ಟಾಚಾರ ನಡೆದಿದೆ ಎಂಬ ಅಪಸ್ವರಗಳ ನಡುವೆಯೂ ಭಾರತ ಮೊದಲಬಾರಿಗೆ ಆಯೋಜಿಸಿದ ಈ ಕ್ರೀಡಾಕೂಟ ಯಶಸ್ವಿಯಾಗಿ ಕೊನೆಗೊಂಡು ವಿಶ್ವದ ಗಮನ ಸೆಳೆಯಿತು. ಭಾರತ ಹಿಂದೆಂದೂ ಇಲ್ಲದಷ್ಟು ಚಿನ್ನದ ಪದಕಗಳನ್ನು ಗೆದ್ದು ಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ಸಂಭ್ರಮಿಸಿತು. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕಾಮನ್‌ವೆಲ್ತ್ ಕ್ರೀಡಾಕೂಟಗಳು 2014ರಲ್ಲಿ ಸ್ಕಾಟ್‌ಲ್ಯಾಂಡ್‌ನ ಗ್ಲಾಸ್ಗೊದಲ್ಲಿ ನಡೆಯಲಿವೆ.



ಗಗನ್ ನಾರಂಗ್ (ಶೂಟಿಂಗ್)

## ವೀರ ಕನ್ನಡಿಗರು!

ಈ ಸಲ ಕರ್ನಾಟಕದ ಯಾವ ಆಟಗಾರರು ಚಿನ್ನದ ಪದಕ ಗೆದ್ದರು ಗೊತ್ತೆ? ರಾಜ್ಯದ ಅಶ್ವಿನಿ ಅಕ್ಕುಂಜಿ ರಿಲೇ ಓಟದಲ್ಲಿ ಹಾಗೂ ಅಶ್ವಿನಿ ಪೊನ್ನಪ್ಪ ಬ್ಯಾಡ್ಮಿಂಟನ್‌ನಲ್ಲಿ ಸ್ವರ್ಣ ಗಳಿಸಿದರೆ ವಿಕಾಸ್ ಗೌಡ ಡಿಸ್ಕಸ್ ಥ್ರೋನಲ್ಲಿ ಬೆಳ್ಳಿ ಪದಕ ಗೆದ್ದರು. ಓಟದಲ್ಲಿ ಚಿನ್ನದ ಪದಕ ಗೆದ್ದ ಅಶ್ವಿನಿ ಉಡುಪಿ ಬಳಿಯ ಅಕ್ಕುಂಜಿ ಎಂಬ ಸಣ್ಣ ಗ್ರಾಮದವರು. 'ಚಿಕ್ಕವರಿದ್ದಾಗ ದನ ಕಾಯಲು ಹೋಗುತ್ತಿದ್ದೆ, ದನಗಳ ಹಿಂದೆ ಹಿಂದೆ ಓಡುತ್ತಿದ್ದೆ, ಈ ಯಶಸ್ಸಿನಲ್ಲಿ ಅವಕ್ಕೂ ಪಾಲಿದೆ' ಎಂದು ಅವರು ಹೇಳಿದ್ದಾರೆ. ಸೂಕ್ತ ಪ್ರೋತ್ಸಾಹ ದೊರೆತರೆ ಗ್ರಾಮೀಣ ಪ್ರತಿಭೆಗಳೂ ಏನನ್ನಾದರೂ ಸಾಧಿಸಬಲ್ಲರು ಎಂಬುದಕ್ಕೆ ಅಶ್ವಿನಿ ಅಕ್ಕುಂಜಿ ಸಾಕ್ಷಿ. (ಏಷ್ಯಾಡ್‌ನಲ್ಲೂ ಆಕೆ ಎರಡು ಚಿನ್ನ ಗೆದ್ದರು.)

ಆದರೆ ಹರ್ಯಾಣ ರಾಜ್ಯದ ಸಾಧನೆ ಬೆರಗು ಹುಟ್ಟಿಸುವಂಥದು. ಭಾರತ ಕಾಮನ್‌ವೆಲ್ತ್‌ನಲ್ಲಿ ಗಳಿಸಿದ 38 ಚಿನ್ನದ ಪದಕಗಳಲ್ಲಿ 19 ಪದಕಗಳನ್ನು ಹರ್ಯಾಣದ ಆಟಗಾರರೇ ಗೆದ್ದಿದ್ದಾರೆ. ದೇಶ ಗೆದ್ದ ಒಟ್ಟು 101 ಪದಕಗಳಲ್ಲಿ ಹರ್ಯಾಣದ ಕೊಡುಗೆ 37.



ಸೈನಾ ನೆಹ್ವಾಲ್ (ಬ್ಯಾಡ್ಮಿಂಟನ್)





ಸುಶೀಲ್‌ಕುಮಾರ್ (ಕುಸ್ತಿ)

# ಕಾಮನ್‌ವೆಲ್ತ್ ಕ್ರೀಡೆಗಳು



ಅಶ್ವಿನಿ ಅಕ್ಕುಂಜಿ (ರಿಲೇ ಸ್ವರ್ಣ)

ನಮ್ಮ ದೇಶ ವಿಜ್ಞಾನ–ತಂತ್ರಜ್ಞಾನಗಳಲ್ಲಿ ಜಗತ್ತಿನ ಮುಂಚೂಣಿ ದೇಶಗಳಲ್ಲಿ ಒಂದು. ಕ್ರೀಡೆಯಲ್ಲಿ ಮಾತ್ರ ನಮ್ಮ ದೇಶದ ಕ್ರೀಡಾಪಟುಗಳ ಸಾಧನೆ ಸ್ವಲ್ಪ ಕಡಿಮೆಯೇ. ಆದರೆ 2010ರ ವರ್ಷದಲ್ಲಿ ಕಾಮನ್‌ವೆಲ್ತ್‌ನಲ್ಲಿ ಮತ್ತು ಏಷ್ಯಾಡ್‌ನಲ್ಲಿ ನಮ್ಮ ಕ್ರೀಡಾಪಟುಗಳು ತೋರಿಸಿದ ಪ್ರತಿಭೆ ನಿಜಕ್ಕೂ ಶ್ಲಾಘನೀಯ.

ಆಟ ನಮ್ಮ ದೇಹ, ಮನಸ್ಸುಗಳನ್ನು ಆರೋಗ್ಯಪೂರ್ಣವಾಗಿಸುತ್ತದೆ. ಉಲ್ಲಾಸ ತುಂಬುತ್ತದೆ. ಆಟಗಳನ್ನು ಪಾಠದಷ್ಟೇ ಗಮನವಿಟ್ಟು ಆಡಿ. ಪರಿಶ್ರಮದಿಂದ ಎಲ್ಲವನ್ನೂ ಸಾಧಿಸಬಹುದು. ಈ ಸಂಚಿಕೆ ನಿಮಗೆ ಸ್ಫೂರ್ತಿಯಾಗಲಿ ಎಂದು ಹಾರೈಸುತ್ತೇವೆ. –ಸಂಪಾದಕರು





## ಚಿಹ್ನೆ, ಲಾಂಛನ

ಇಲ್ಲಿ ಪಕ್ಕದಲ್ಲಿರುವುದು ಹೊಸದಿಲ್ಲಿಯಲ್ಲಿ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದ ಅಧಿಕೃತ ಚಿಹ್ನೆ. ಪುಟದ ಎಡತುದಿಯಲ್ಲಿ ಬಿಳಿ ಟೀಶರ್ಟ್ ಮತ್ತು ನೀಲಿ ನಿಕ್ಕರ್ ಹಾಕಿಕೊಂಡಿರುವ ಒಂದು ಹುಲಿಯ ಚಿತ್ರವಿದೆಯಲ್ಲವೆ? ಅದು ಈ ಕ್ರೀಡಾಕೂಟದ ಲಾಂಛನ. ಅದರ ಹೆಸರು 'ಶೇರಾ'.

## ದೆಹಲಿ ಕೂಟದ ವಿಶೇಷ

- ಭಾರತ ಮೊದಲ ಬಾರಿಗೆ ಪದಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಅಲ್ಲದೇ ಅದು ಗಳಿಸಿದ ಒಟ್ಟು ಪದಕಗಳ ಸಂಖ್ಯೆ ನೂರನ್ನು ದಾಟಿತು. ಒಂದು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ನೂರಕ್ಕಿಂತ ಹೆಚ್ಚು ಪದಕ ಗಳಿಸಿದ ನಾಲ್ಕನೇ ದೇಶ ಭಾರತ ಎಂಬ ದಾಖಲೆಯನ್ನೂ ಬರೆಯಿತು.
- ಐದು ಚಿನ್ನದ ಪದಕ ಗೆದ್ದ ಆಸ್ಟ್ರೇಲಿಯಾದ ಈಜುಗಾರ್ತಿ ಕೌಟ್ಸ್ ದೆಹಲಿ ಕ್ರೀಡಾಕೂಟದ ಅತ್ಯಂತ ಯಶಸ್ವಿ ಆಟಗಾರ್ತಿ ಎನಿಸಿಕೊಂಡರು.
- ನಾಲ್ಕು ಚಿನ್ನದ ಪದಕ ಗಳಿಸಿದ ಭಾರತದ ಶೂಟರ್ ಗಗನ್ ನಾರಂಗ್ ಅತ್ಯುತ್ತಮ ಸಾಧನೆಗೈದ ಪುರುಷ ಸ್ಪರ್ಧಿ ಎನಿಸಿದರು.
- ಆಸ್ಟ್ರೇಲಿಯಾದ ಕ್ರೊಕ್ ಎರಡು ಕ್ರೀಡೆಗಳಲ್ಲಿ (ಸ್ಕೈಕ್ಲಿಂಗ್ ಮತ್ತು ಡೈವಿಂಗ್) ಚಿನ್ನದ ಪದಕ ಗೆದ್ದದ್ದು ಇನ್ನೊಂದು ವಿಶೇಷ.



ಅಶ್ವಿನಿ, ಜ್ವಾಲಾ (ಬ್ಯಾಡ್ಮಿಂಟನ್)

## ಕಾಮನ್‌ವೆಲ್ತ್ ಪದಕ ಪಟ್ಟಿ

| ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಆಸ್ಟ್ರೇಲಿಯಾ | 74 | 55 | 48 | 177 |
| ಭಾರತ | 38 | 27 | 36 | 101 |
| ಇಂಗ್ಲೆಂಡ್ | 37 | 59 | 46 | 142 |
| ಕೆನಡಾ | 26 | 17 | 32 | 75 |
| ದಕ್ಷಿಣ ಆಫ್ರಿಕ | 12 | 11 | 10 | 33 |

## ಏಷ್ಯಾಡ್ ಪದಕ ಪಟ್ಟಿ

| ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಚೀನಾ | 199 | 119 | 98 | 416 |
| ದಕ್ಷಿಣ ಕೊರಿಯ | 76 | 65 | 91 | 232 |
| ಜಪಾನ್ | 48 | 74 | 94 | 216 |
| ಇರಾನ್ | 20 | 14 | 25 | 59 |
| ಕಜಕಸ್ತಾನ್ | 18 | 23 | 38 | 79 |
| ಭಾರತ | 14 | 17 | 33 | 64 |

# ಏಷ್ಯಾಡ್ ಕ್ರೀಡೆಗಳು



ಸೋಮ್‌ದೇವ್ (ಟೆನ್ನಿಸ್)



ವಿಜೇಂದರ್ (ಬಾಕ್ಸಿಂಗ್)





ಹದಿನಾರನೇ ಏಷ್ಯನ್ ಕ್ರೀಡಾಕೂಟ ಚೀನಾದ ಗಾಂಗ್ಝೌ ನಗರದಲ್ಲಿ 2010ರ ನವೆಂಬರ್ 12ರಿಂದ 27ನೇ ತಾರೀಖಿನವರೆಗೆ ನಡೆಯಿತು. ಆದರೆ ಮೊದಲ ಏಷ್ಯಾಡ್ ನಡೆದದ್ದು ಭಾರತದಲ್ಲಿ ಎಂಬುದು ನಿಮಗೆ ಗೊತ್ತೆ? ಹೌದು.

ಒಲಿಂಪಿಕ್ಸ್ ನಂತರದ ಅತಿ ದೊಡ್ಡ ಕ್ರೀಡಾಕೂಟವೆಂದು ಪರಿಗಣಿಸಲಾದ ಈ ಕ್ರೀಡಾಕೂಟ ಮೊದಲ ಬಾರಿಗೆ ನಡೆದದ್ದು ದಿಲ್ಲಿಯಲ್ಲಿ. ಎರಡನೇ ಮಹಾಯುದ್ಧದ ಬಳಿಕ ಏಷ್ಯಾಖಂಡದ ಅನೇಕ ದೇಶಗಳು ಸ್ವತಂತ್ರವಾದವು. ಅವು ಸದ್ಭಾವನೆಯಿಂದ ನಮ್ಮ ನಮ್ಮಲ್ಲೇ ಒಂದು ಆಟೋಟ ಸ್ಪರ್ಧೆ ನಡೆದರೆ ಚೆನ್ನ ಎಂದು ಆಲೋಚಿಸಿ ಒಲಿಂಪಿಕ್ಸ್ ಮಾದರಿಯಲ್ಲಿ ಕ್ರೀಡಾಕೂಟವೊಂದನ್ನು ರೂಪಿಸಿದವು. ಹಾಗೆ ಆರಂಭವಾದದ್ದೇ ಏಷ್ಯಾಡ್.

ಈ ಸಲ ಚೀನಾದಲ್ಲಿ ನಡೆದ ಭವ್ಯ ಕ್ರೀಡಾಕೂಟದಲ್ಲಿ ಎಲ್ಲಾ 45 ಸದಸ್ಯ ದೇಶಗಳು ಪಾಲ್ಗೊಂಡಿದ್ದವು. 42 ಕ್ರೀಡೆಗಳ 476 ವಿಭಾಗಗಳಲ್ಲಿ ತೀವ್ರ ಪೈಪೋಟಿಯ ಸ್ಪರ್ಧೆ ನಡೆಯಿತು. ಉದ್ಘಾಟನಾ ಸಮಾರಂಭ ಮತ್ತು ಮುಕ್ತಾಯ ಸಮಾರಂಭಗಳು ಪರ್ಲ್ ನದಿ ದಂಡೆಯ ದ್ವೀಪವೊಂದರಲ್ಲಿ ನಡೆದದ್ದು ಈ ಸಲದ ವಿಶೇಷ. ಈ ಎರಡು ಕಾರ್ಯಕ್ರಮಗಳು ಇದಕ್ಕೂ ಮುಂಚೆ ಎಂದೂ ಕ್ರೀಡಾಂಗಣದ ಹೊರಗೆ ನಡೆದಿರಲಿಲ್ಲ.

ಈ ಕೂಟದಲ್ಲಿ 119 ಚಿನ್ನದ ಪದಕಗಳೂ ಸೇರಿದಂತೆ ಒಟ್ಟು 416 ಪದಕಗಳನ್ನು ಗೆದ್ದ ಚೀನಾ ಹೊಸ ದಾಖಲೆ ಬರೆಯಿತು.

ಭಾರತವೂ ಹಿಂದೆಂದಿಗಿಂತ ಉತ್ತಮ ಸಾಧನೆ ತೋರಿ 14 ಚಿನ್ನದ ಪದಕ ಗೆದ್ದಿತು. ಒಟ್ಟಾರೆ 64 ಪದಕಗಳನ್ನು ಗಳಿಸಿ ನಾವು ಪದಕಪಟ್ಟಿಯಲ್ಲಿ ಆರನೇ ಸ್ಥಾನ ಪಡೆದವು. ಟೆನ್ನಿಸ್ ಪಟು ಸೋಮ್‌ದೇವ್ 2 ಚಿನ್ನದ ಪದಕ ಗಳಿಸಿದರೆ,ಕನ್ನಡತಿ ಅಶ್ವಿನಿ ಅಕ್ಕುಂಜಿ ಕೂಡ ರಿಲೇ ಓಟ ಮತ್ತು ಹರ್ಡಲ್ಸ್‌ನಲ್ಲಿ 2 ಚಿನ್ನದ ಪದಕ ಗೆದ್ದು ದೇಶದ ಗೌರವ ಹೆಚ್ಚಿಸಿದರು.

ಒಟ್ಟಾರೆ ಈ ಸಲ 3 ಹೊಸ ವಿಶ್ವದಾಖಲೆಗಳು ಸೃಷ್ಟಿಯಾದವು. ಮುಂದಿನ ಏಷ್ಯಾಡ್ 2014ರಲ್ಲಿ ದಕ್ಷಿಣ ಕೊರಿಯಾದ ಇಂಚಿಯಾನ್‌ನಲ್ಲಿ ನಡೆಯುವುದೆಂದು ನಿಶ್ಚಯಿಸಲಾಗಿದೆ.

ಭಾರತ, ಇಂಡೋನೇಷ್ಯಾ, ಜಪಾನ್, ಫಿಲಿಪ್ಪೀನ್ಸ್, ಶ್ರೀಲಂಕಾ, ಸಿಂಗಪುರ ಮತ್ತು ಥೈಲ್ಯಾಂಡ್‌ಗಳು ಮಾತ್ರ ಎಲ್ಲಾ 16 ಏಷ್ಯಾಡ್‌ಗಳಲ್ಲಿ ಪಾಲ್ಗೊಂಡಿವೆ. ಈವರೆಗೆ ಚೀನಾ ಮತ್ತು ಜಪಾನ್‌ಗಳು ಮಾತ್ರ ಪದಕಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸುವಲ್ಲಿ ಯಶಸ್ವಿಯಾಗಿವೆ. 1982ರಲ್ಲಿ ಭಾರತ ಎರಡನೇ ಬಾರಿಗೆ ಏಷ್ಯಾಡ್ ಅನ್ನು ಆಯೋಜಿಸಿತ್ತು. ಅದು ನಡೆದದ್ದು ಸಹ ಹೊಸದಿಲ್ಲಿಯಲ್ಲೇ. 1982ರ ಕ್ರೀಡಾಕೂಟದ ಆನೆ ಲಾಂಛನ 'ಅಪ್ಪು' ಆ ದಿನಗಳಲ್ಲಿ ಬಹಳ ಜನಪ್ರಿಯವಾಗಿತ್ತು.

ಫೆಬ್ರವರಿಯಲ್ಲಿ ಕ್ರಿಕೆಟ್ ವಿಶ್ವಕಪ್ ನಡೆಯಲಿದೆ. ವಿಶ್ವಕಪ್ ಕ್ರಿಕೆಟ್ ಇತಿಹಾಸದ ಬಗ್ಗೆ ನಿಮಗೇನೇನು ಗೊತ್ತು? ಚೆನ್ನಾಗಿ ಬರೆದು ಕಳಿಸಿದರೆ ಬಹುಮಾನವಿದೆ. ವಿಳಾಸ ಇಲ್ಲಿದೆ.

**ಅದಮ್ಯ ಚೇತನ**
**'ಅನ್ನಪೂರ್ಣ'**
**ಮಹಾನಗರಪಾಲಿಕೆ ಸಮುದಾಯ ಭವನ**
**ಗವಿಪುರ, ಬೆಂಗಳೂರು –19**

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

**ಸರ್ವ ಶಿಕ್ಷಣ ಅಭಿಯಾನ ಮಿಷನ್**
ಬೆಂಗಳೂರು